**ಸಾಕ್ಷಿಯನ್ನು ದಿನಾಂಕ 9.1.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಎಂ.ಎನ್.ಆರ್ ವಕೀಲರಿಂದಃ**

ನಿಮ್ಮ ತಂದೆ ಸಿದ್ದೇಗೌಡರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿದಾರರು ನನ್ನ ತಾಯಿಗೆ 6 ಜನ ಮಕ್ಕಳಿರುತ್ತಾರೆ, ಅವರ ಪೈಕಿ ಇಬ್ಬರು ತೀರಿಕೊಂಡಿರುತ್ತಾರೆ. ಅವರ ಹೆಸರು ಸಿಂಗೇಗೌಡ, ದೇವಮ್ಮ, ಜವರಮ್ಮ, ನಾಗರಾಜೇಗೌಡ, ನೀಲಮ್ಮ ಹಾಗೂ ಸೋಮೇಶ ಆಗಿರುತ್ತದೆ. ಸದರಿ ನೀಲಮ್ಮ ಹಾಗೂ ಸೋಮೇಶ ಚಿಕ್ಕವರಿದ್ದಾಗಲೇ ತೀರಿಕೊಂಡಿರುತ್ತಾರೆ. ಮೇಲೆ ಹೇಳಿದ ದೇವಮ್ಮ ಬದುಕಿರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ಪ್ರತಿವಾದಿಯರು ಯಾರೆಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎನ್ನುವರು. 2 ರಿಂದ 4 ನೇ ಪ್ರತಿವಾದಿಯರ ತಂದೆಯ ಹೆಸರು ಸಿದ್ದೇಗೌಡ ಆಗಿರುತ್ತದೆ. 1 ನೇ ಪ್ರತಿವಾದಿಯ ಗಂಡನ ಹೆಸರು ಸಿದ್ದೇಗೌಡ ಆಗಿರುತ್ತದೆ. 1 ನೇ ಪ್ರತಿವಾದಿಯ ತಂದೆಯಾದ ಸಿದ್ದೇಗೌಡ ನನ್ನ ತಂದೆ ಎಂದರೆ ಸರಿ. ನನ್ನ ತಾಯಿಯ ಹೆಸರು ಸಣ್ಣತಾಯಮ್ಮ ಅಲಿಯಾಸ್ ಜವರಮ್ಮ ಆಗಿರುತ್ತದೆ. ನನ್ನ ತಾಯಿಯ ಹೆಸರು ಸಣ್ಣತಾಯಮ್ಮ ಅಲಿಯಾಸ್ ಜವರಮ್ಮ ಎಂದು ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಯರು ಈ ದಾವೆಗೆ ಸಲ್ಲಿಸಿರುವ ತಕರಾರಿನ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಆಸ್ತಿಯು ನಮಗೆ ಸೇರಿರುತ್ತದೆ ಎಂದು ದಾವೆ ಹಾಕಿರುತ್ತೇನೆ. ದಾವ ಸರ್ವೆ ನಂ.34/2 ಮೂಲತಃ ಜವರೇಗೌಡರು ಖರೀದಿಸಿರುವ ಆಸ್ತಿಯಾಗಿರುತ್ತದೆ. ಅವರು ಮದುವೆಯಾಗಿರುವುದಿಲ್ಲ. ಸದರಿ ಜವರೇಗೌಡ ನನ್ನ ತಾತನಾಗಬೇಕು. ಜವರೇಗೌಡರು ನನ್ನ ತಂದೆ ಸಿದ್ದೇಗೌಡರನ್ನು ದತ್ತು ಪಡೆದಿರುವುದಿಲ್ಲ. ಜವರೇಗೌಡರು ಹೇಗೆ ತಾತನಾಗಬೇಕು ಎಂದರೆ ಸಾಕ್ಷಿದಾರರು ಅವರಿಗೆ ಸಣ್ಣಮ್ಮ ಎಂಬ ಸಹೋದರಿ ಇದ್ದು, ಸದರಿ ಸಣ್ಣಮ್ಮ ನನ್ನ ತಾಯಿಯ ತಾಯಿ ಎನ್ನುವರು. ಸದರಿ ಜವರೇಗೌಡರಿಗೆ ಸಣ್ಣಮ್ಮ ಹೊರತುಪಡಿಸಿ ಬೇರೆ ಯಾರು ಸಹೋದರ ಸಹೋದರಿಯರು ಇರುವುದಿಲ್ಲ. ಸದರಿ ಜವರೇಗೌಡರು ಬದುಕಿದ್ದಾಗ ಯಾರಿಗೂ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ನನ್ನ ತಂದೆ ಸಿದ್ದೇಗೌಡರನ್ನು ಜವರೇಗೌಡರು ದತ್ತು ಪಡೆದುಕೊಂಡಿದ್ದು ನಾನು ಆಸ್ತಿ ಕಬಳಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಣ್ಣತಾಯಮ್ಮ ತೀರಿಕೊಂಡ ನಂತರ ಸಿದ್ದೇಗೌಡರು 1 ನೇ ಪ್ರತಿವಾದಿಯನ್ನು ವಿವಾಹವಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಿದ್ದೇಗೌಡರು ಸಣ್ಣತಾಯಮ್ಮ ತೀರಿಕೊಂಡ ನಂತರ 1 ನೇ ಪ್ರತಿವಾದಿಯನ್ನು ಮದುವೆಯಾಗಿದ್ದು, ನಾನು ಸದರಿ 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಆಸ್ತಿಯ ಪೈಕಿ

2-08 ಎಕರೆಯನ್ನು 3 ನೇ ಪ್ರತಿವಾದಿಗೆ ಮತ್ತು 1 ಎಕರೆಯನ್ನು ವಾದಿಯರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ಹುಣಸೂರು ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಓ.ಎಸ್ 33/2010ರ ದಾವಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸದರಿ ದಾವಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುತ್ತದಾ ಎಂದರೆ ಸಾಕ್ಷಿದಾರರು ಹಾಜರುಪಡಿಸಿರುತ್ತೇನೆ ಎನ್ನುವರು. ನಾನು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.